ಕರ್ನಾಟಕ ಸರ್ಕಾರ

# ರಾಷ್ಟ್ರೀಯ ಆರೋಗ್ಯ ಅಭಿಯಾನ

"ಆರೋಗ್ಯ ಸೌಧ", 6ನೇ ಮಹಡಿ, ಈಸ್ಟ್ ವಿಂಗ್, ಮಾಗಡಿ ರಸ್ತೆ, ಬೆಂಗಳೂರು
E-mail Address: rksk.karnataka@gmail.com / 080 - 23295642

ಪತ್ರ ಸಂಖ್ಯೆ: NHM/RKSK/NDD/04/2022-23 ದಿನಾಂಕ: ಆಗಸ್ಟ್ 06, 2022

ಇವರಿಗೆ,

ಮಾನ್ಯ ಆಯುಕ್ತರು

ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ.

ಮಾನ್ಯರೇ,

ವಿಷಯ:-ಆಗಸ್ಟ್ 2022 ರಲ್ಲಿ ಕರ್ನಾಟಕದ ಎಲ್ಲಾ 31 ಜಿಲ್ಲೆಗಳ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ನಡೆಯಲಿರುವ ರಾಷ್ಟ್ರೀಯ ಜಂತುಹುಳು ನಿವಾರಣಾ ದಿನದ (ಎನ್.ಡಿ.ಡಿ.) ಪ್ರಕ್ರಿಯೆಗಳ ಮೇಲ್ವಿಚಾರಣೆ ಮತ್ತು ವ್ಯಾಪ್ತಿಯ ಮೌಲ್ಯಮಾಪನ ನಡೆಸಲು ಆರೋಗ್ಯ ಇಲಾಖೆಗೆ ತಾಂತ್ರಿಕ ಸಹಕಾರ ನೀಡುತ್ತಿರುವ ಎವಿಡೆನ್ಸ್ ಆ್ಯಕ್ಷನ್ ಸಂಸ್ಥೆಗೆ ಸಮೀಕ್ಷೆ ನಡೆಸಲು ಸಹಕಾರ ನೀಡಲು ಕೋರಿ.

********

ಇದೇ ಆಗಸ್ಟ್ 10, 2022 ರಂದು ರಾಷ್ಟ್ರೀಯ ಜಂತುಹುಳು ನಿವಾರಣಾ ದಿನ ಮತ್ತು ಆಗಸ್ಟ್ 17, 2022 ರಂದು 'ಮಾಪ್-ಅಪ್ ದಿನ'ವನ್ನು ರಾಜ್ಯಾದ್ಯಂತ ನಡೆಸಲಾಗುತ್ತಿದೆ. ರಾಜ್ಯದ 31 ಜಿಲ್ಲೆಗಳ ಎಲ್ಲಾ ಅಂಗನವಾಡಿಗಳಲ್ಲಿ ಮತ್ತು ಶಾಲೆ, ಕಾಲೇಜು, ತಾಂತ್ರಿಕ ಶಿಕ್ಷಣ ಸಂಸ್ಥೆ, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಸಂಸ್ಥೆ ಗಳಲ್ಲಿ 1 ರಿಂದ 19 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಜಂತುಹುಳು ನಿವಾರಣಾ ಔಷಧಿಯಾದ 'ಆಲ್ಬೆಂಡಝೋಲ್' ಮಾತ್ರೆಗಳನ್ನು ನೀಡಲಾಗುತ್ತದೆ.

ಈ ಕಾರ್ಯಕ್ರಮದ ಮೇಲ್ವಿಚಾರಣಾ ಕಾರ್ಯಚಟುವಟಿಕೆಯ ಸಮೀಕ್ಷೆಯನ್ನು ನಡೆಸಲು ಎವಿಡೆನ್ಸ್ ಆ್ಯಕ್ಷನ್- ಡಿ ವರ್ಮ್ ದಿ ವರ್ಲ್ಡ್ ಸಂಸ್ಥೆಯು "ಎಸ್.ಆರ್.ಎನ್. ಓ ಇಂಡಿಯಾ ಎಲ್. ಎಲ್. ಪಿ (SRNO India LLP)" ಎಂಬ ಹೆಸರಿನ ಅನುಭವೀ ಸಮೀಕ್ಷಾ ಘಟಕದ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದೆ. ಈ ಸಮೀಕ್ಷೆಯಲ್ಲಿ ಸುಮಾರು 125 ಸಮೀಕ್ಷಕರಿದ್ದು, ಅವರಲ್ಲಿ ಪ್ರತಿಯೊಬ್ಬರೂ ರಾಜ್ಯಾದ್ಯಂತ ಎಲ್ಲಾ 31 ಜಿಲ್ಲೆಗಳ ಆಯ್ದ 125 ತಾಲೂಕುಗಳಲ್ಲಿ 'ರಾಷ್ಟ್ರೀಯ ಜಂತುಹುಳು ನಿವಾರಣಾ ದಿನ (ಆಗಸ್ಟ್ 10, 2022) ಹಾಗೂ 'ಮಾಪ್ ಅಪ್ ದಿನ '(ಆಗಸ್ಟ್ 17, 2022 ರಂದು) ಒಂದು ತಾಂತ್ರಿಕ ಶಿಕ್ಷಣ ಸಂಸ್ಥೆಗೆ ಪ್ರಕ್ರಿಯೆಗಳ ಮೇಲ್ವಿಚಾರಣೆ (Process Monitoring) ನಡೆಸಲು ಮತ್ತು ಆಗಸ್ಟ್ 26 ರಿಂದ ಸೆಪ್ಟೆಂಬರ್ 02, 2022ರ ವರೆಗೆ ವ್ಯಾಪ್ತಿಯ ಮೌಲ್ಯಮಾಪನಕ್ಕಾಗಿ (Coverage Validation) ಯಾಧೃಚ್ಛಿಕವಾಗಿ ಆಯ್ಕೆ (Randomly Selected) ಮಾಡಲಾದ ಐದು ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಲಿದ್ದಾರೆ.

ಸಮೀಕ್ಷೆ ಪ್ರಕ್ರಿಯೆ: ಸಮೀಕ್ಷಾ ಸಮಯದಲ್ಲಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಂದ ಸಂಗ್ರಹಿಸುವ ದತ್ತಾಂಶಗಳ ಗುಣಮಟ್ಟ ಕಾಪಾಡಲು ಮತ್ತು ಸಮಯಪಾಲನೆ ಮಾಡಲು ಒಂದು ಪ್ರಮಾಣಿತ ಕಂಪ್ಯೂಟರ್ ಅಸಿಸ್ಟೆಡ್ ಪರ್ಸನಲ್ ಇಂಟರ್ವ್ಯೂವಿಂಗ್ (CAPI) ಸಾಧನಗಳನ್ನು ಸಮೀಕ್ಷಕರು ಬಳಸುತ್ತಾರೆ. ಕಲಹಾಕಿದ ದತ್ತಾಂಶದ ನಿಖರತೆಗಾಗಿ ಎವಿಡೆನ್ಸ್ ಆ್ಯಕ್ಷನ್ ಸಂಸ್ಥೆ ಒಂದು ಪ್ರಮಾಣಿತ ಸಮೀಕ್ಷಾ ಸಾಧನವನ್ನು ಅಭಿವೃದ್ಧಿ ಪಡಿಸಿದೆ. ಇದರಿಂದಾಗಿ ಪ್ರತಿಕ್ರಿಯೆದಾರರಿಂದ ಸಂಗ್ರಹಿಸಲ್ಪಟ್ಟ ನಿಖರ ಮಾಹಿತಿಗಳ ಮೌಲ್ಯೀಕರಣ ಮಾಡಲು ಮತ್ತು ಸರಕಾರಕ್ಕೆ ಶಿಫಾರಸ್ಸನ್ನು ಸಲ್ಲಿಸಲು ಅನುವುಮಾಡಿಕೊಡುತ್ತದೆ. ಈ ಸ್ವತಂತ್ರ ಮೇಲ್ವಿಚಾರಣಾ ಸಮೀಕ್ಷಕರು ಜಂತುಹುಳು ನಿವಾರಣಾ ಕಾರ್ಯಕ್ರಮ ಅನುಷ್ಠಾನ ಮತ್ತು ವ್ಯಾಪ್ತಿ ವರದಿಯ ಸಂಬಂಧಿತ ಮಾಹಿತಿಯನ್ನು ಭೇಟಿ ನೀಡಿರುವ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಂದ ಸಂಗ್ರಹಿಸುತ್ತಾರ ಮತ್ತು ಈ ಸ್ವತಂತ್ರ ಮೇಲ್ವಿಚಾರಣೆಯ ಅಂತಿಮ ವರದಿಯನ್ನು ತಮ್ಮ ಇಲಾಖೆಗೆ ಅಧಿಕೃತವಾಗಿ ಸಲ್ಲಿಸಲಾಗುತ್ತದೆ.

ಈ ಸ್ವತಂತ್ರ ಸಮೀಕ್ಷಕರಿಗೆ ಮೇಲ್ವಿಚಾರಣಾ ಕಾರ್ಯಗಳ ಬಗ್ಗೆ ತರಬೇತಿಯನ್ನು ನೀಡಲಾಗುವುದು ಹಾಗೂ ಕಾರ್ಯಕ್ರಮದ ಬಗ್ಗೆ ವಿವರವಾದ ವಿಶ್ಲೇಷಣೆ ನೀಡಲಾಗುವುದು. ಸಮೀಕ್ಷಕರು ಮೇಲ್ವಿಚಾರಣೆಯ ಪ್ರಶ್ನಾವಳಿಗಳನ್ನು ಒಳಗೊಂಡಂತೆ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ನಡೆಯುವ ಜಂತುಹುಳು ನಿವಾರಣೆಯ ಸಂಪೂರ್ಣ ಕಾರ್ಯಚಟುವಟಿಕೆಗಳನ್ನು ಗಮನಿಸುತ್ತಾರೆ. ಹಾಜರಿ ಪುಸ್ತಕವನ್ನು, ತಾಂತ್ರಿಕ ಶಿಕ್ಷಣ ಸಂಸ್ಥೆ ವರದಿ ನಮೂನೆಗಳನ್ನು ಪರಿಶೀಲಿಸುತ್ತಾರೆ, ಮತ್ತು ಔಷಧಿಗಳ, ಐಇಸಿ ಸಾಮಗ್ರಿಗಳ ಲಭ್ಯತೆ ಇವುಗಳನ್ನು ನೇರವಾಗಿಯೇ ಮೌಲ್ಯೀಕರಿಸಿ ಆನ್ ಲೈನ್ ರಿಪೋರ್ಟಿಂಗ್ ಪ್ರಕ್ರಿಯೆಯಂತೆ ಟ್ಯಾಬ್ ನಲ್ಲಿ ಇಂಧೀಕರಿಸುತ್ತಾರೆ. ಪ್ರತಿಯೊಂದು ಮಾದರಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾಂಶುಪಾಲರು/ಪ್ರಾಧ್ಯಾಪಕರನ್ನು ಮತ್ತು ಮೂರು ವಿದ್ಯಾರ್ಥಿಗಳನ್ನು (ಮೂರು ಬೇರೆ ಬೇರೆ ಯಾದೃಚ್ಛಿಕವಾಗಿ ಆಯ್ಕೆ ಮಾಡಲಾದ

ಈ ನಿಟ್ಟಿನಲ್ಲಿ ಎವಿಡೆನ್ಸ್ ಆ್ಯಕ್ಷನ್- ಡಿ-ವರ್ಮ್ ದಿ ವರ್ಲ್ಡ್ ಇನಿಶಿಯೇಟಿವ್ ಸಂಸ್ಥೆಯು ನಿಯುಕ್ತಿಗೊಳಿಸಿದ ಈ ಸ್ವತಂತ್ರ ಸಮೀಕ್ಷಕರು ಯಾದೃಚ್ಛಿಕವಾಗಿ ಆಯ್ಕೆ ಮಾಡಲಾದ (Randomly Selected) ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಸಂಸ್ಥೆಗಳಿಗೆ ಭೇಟಿ ನೀಡಿ ತಿಳಿಸಲಾದ . ಚಟುವಟಿಕೆಗಳನ್ನು ನಿರ್ವಹಿಸಲು ಅನುಮತಿ ಹಾಗು ಜಿಲ್ಲಾ ಮತ್ತು ಕೆಳಹಂತದಲ್ಲಿ ಪೂರ್ಣ ಸಹಕಾರ ನೀಡುವಂತೆ ನಿರ್ದೇಶಿಸಲು ಈ ಮೂಲಕ ತಮ್ಮಲ್ಲಿ ವಿನಂತಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

6/8/22

ಉಪ ನಿರ್ದೇಶಕರು,
(ಆರ್.ಬಿ.ಎಸ್.ಕೆ, ಆರ್.ಕೆ.ಎಸ್.ಕೆ. & ಶುಚಿ)
ಹಾಗೂ ರಾಜ್ಯ ನೋಡಲ್ ಅಧಿಕಾರಿಗಳು (ಎನ್.ಡಿ.ಡಿ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಪ್ರತಿಗಳು:

1. ರಾಜ್ಯ ನೋಡಲ್ ಅಧಿಕಾರಿ (ರಾಷ್ಟ್ರೀಯ ಜಂತುಹುಳ ನಿವಾರಣಾ ದಿನ) ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ
2. ರಾಜ್ಯ ಯೋಜನಾ ವ್ಯವಸ್ಥಾಪಕರು- ಕರ್ನಾಟಕ, ಎವಿಡೆನ್ಸ್ ಆ್ಯಕ್ಷನ್- ಡಿ-ವರ್ಮ್ ದಿ ವರ್ಲ್ಡ್ ಇನಿಶಿಯೇಟಿವ್

ದಿನಾಂಕ: 08.08.2022

ಸಂಖ್ಯೆ: ಡಿಟಿಇ/ಎನ್ಎಸ್ಎಸ್/01/ಐಡಿಪಿ/2022–23/07

## ಹಿಂಬರಹ

ಉಪ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ ಬೆಂಗಳೂರು ಇವರ ಪತ್ರ ಸಂಖ್ಯೆ: NHM/RKSK/ NDD/04/2022-23 ದಿನಾಂಕ: 06.08.2022 ರ ಪತ್ರವನ್ನು ಆಯುಕ್ತಾಲಯದ ವ್ಯಾಪ್ತಿಗೊಳಪಡುವ ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.

N. 08/08/2022

ನಿರ್ದೇಶಕರು

ಇವರಿಗೆ,

1. ಆಯುಕ್ತಾಲಯಕ್ಕೊಳಪಡುವ ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ – ಸೂಕ್ತ ಕ್ರಮಕ್ಕಾಗಿ,
2. ರಾಷ್ಟ್ರೀಯ ಆರೋಗ್ಯ ಅಭಿಯಾನ ಬೆಂಗಳೂರು ಇವರ ಮಾಹಿತಿಗಾಗಿ
3. ಇ–ಆಡಳಿತ– ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು